ಎಫ್ ಡಿ ಪಿ ನಂ. 7/2019
ಪಿ ಡಬ್ಲ್ಯು 1 / 4 ನೇ ಎದುರುದಾರರು
ದಿನಾಂಕ 17-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ

ನನ್ನ ತಂದೆ ಅಂಜನಪ್ಪರವರಿಗೆ ಒಟ್ಟು 4 ಜನ ಮಕ್ಕಳು. ವಾದಿ ಶೋಭಾರವರು ಮೂಲದಾವೆಯನ್ನು ಹೂಡುವ ಸಮಯದಲ್ಲಿ ನನ್ನ ತಾಯಿ ನಾಗರತ್ನರವರು ಮೃತ ಪಟ್ಟಿರುತ್ತಾರೆ ಎಂದರೆ ಸರಿ. ನಾನು, ನನ್ನ ಸಹೋದರರಾದ ಶ್ರೀಧರ ಮತ್ತು ಸಹೋದರಿ ಸುಧಾ ಮತ್ತು ನನ್ನ ತಂದೆ ಅಂಜನಪ್ಪರವರು ಒಂದೇ ವಿಳಾಸದಲ್ಲಿ ಒಟ್ಟಿಗೆ ವಾಸ ಇದ್ದೇವೆ ಎಂದರೆ ಸರಿ. ವಾದಿ ಶೋಭಾರವರು ಮದುವೆಯಾದಾಗಿನಿಂದಲೂ ಚೆನ್ನೈನಲ್ಲಿ ನೆಲೆಸಿರುತ್ತಾರೆ ಎಂದರೆ ಸರಿ. ನನ್ನ ಸಹೋದರಿ ಸುಧಾರವರು ಅವರ ಗಂಡನಿಂದ ವಿಚ್ಛೇದನ ಪಡೆದ ನಂತರ ನಮ್ಮ ಜತೆ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಶೋಭಾರವರು ದಾವೆ ಹೂಡಿದ ನಂತರ ನಾನೇ ಸಾಕ್ಷಿ ನುಡಿಯವುದು ನ್ಯಾಯಾಲಯಕ್ಕೆ ಹಾಜರಾಗುವುದು ಮಾಡುತ್ತಿದ್ದೆ ಎಂದರೆ ಸರಿ. ಮೂಲದಾವೆಯಲ್ಲಿ ನನ್ನ ತಂದೆ ನ್ಯಾಯಾಲಯಕ್ಕೆ ವಕಾಲತ್ತು ನಾಮೆಯನ್ನು ಸಲ್ಲಿಸಿದ್ದನ್ನು ಹೊರತು ಪಡಿಸಿ ಎಂದಿಗೂ ಹಾಜರಾಗಿಲ್ಲ ಎಂದರೆ ಸಾಕ್ಷಿ ಅವರ ಪರವಾಗಿ ನಾನೇ ಹಾಜರಾಗಿದ್ದೆ ಎಂದು ನುಡಿಯುತ್ತಾರೆ. 2015 ರಿಂದ ಯಾವ ಕಾರಣಕ್ಕೆ ನನ್ನ ತಂದೆ

ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸಾಕ್ಷಿ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ಓಡಾಡುತ್ತಿದ್ದರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಆಗಾಗಿ ನನ್ನ ತಂದೆಯ ಎಲ್ಲಾ ವಹಿವಾಟುಗಳನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿ.

2. ನಾನು 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ನನ್ನ ತಂದೆ ಪರವಾಗಿ ಓ ಎಸ್ ನಂ.431/2021 ರಂತೆ ಒಂದು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ನಾನು ನನ್ನ ತಂದೆಯಿಂದ ಜಿ ಪಿ ಎ ಪಡೆದುಕೊಂಡು ಸಲ್ಲಿಸಿದ್ದೆ ಎಂದರೆ ಸರಿ. ನನ್ನ ತಂದೆ ಮರಣ ಹೊಂದಿದ ನಂತರ ಸದರಿ ದಾವೆಯಲ್ಲಿ ನನ್ನ ಸಹೋದರಿ ಶೋಭಾರವರನ್ನು ಹೊರತು ಪಡಿಸಿ ಇತರೆ ನನ್ನ ಸಹೋದರ ಸಹೋದರಿಯರನ್ನು ವಾರಸುದಾರರಾಗಿ ತೋರಿಸಿರುತ್ತೇನೆ ಎಂದರೆ ಸರಿ. ಸದರಿ ವಾರಸುದಾರಿಕೆ ಅರ್ಜಿಯನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ ಎಂದರೆ ಸರಿ. 2019 ರಲ್ಲಿ ಪ್ರಸ್ತುತ ಅರ್ಜಿಯ ಆಸ್ತಿಗಳ ಪೈಕಿ ಒಂದು ಸ್ವತ್ತು ಭೂ ಸ್ವಾಧೀನಗೊಂಡಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸ್ವತ್ತಿಗೂ ನಮಗೂ ಸಂಬಂದ ಇಲ್ಲ ಎಂದು ನುಡಿಯುತ್ತಾರೆ. ಸದರಿ ಭೂ ಸ್ವಾಧೀನ ಗೊಂಡ ಸಂಬಂದ ಚಿಕ್ಕಮಗಳೂರಿನಲ್ಲಿ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ಅದರಲ್ಲೂ ಸಹ ನನ್ನ ತಂದೆಯ ಪರವಾಗಿ ನಾನು ಹಾಜರಾಗಿರುತ್ತೇನೆ ಎಂದರೆ ಸರಿ.

3. ನನ್ನ ತಂದೆ ಅಂಜನಪ್ಪರವರು ದಿನಾಂಕ 10/06/2020 ರಂದು ವಿಲ್ ನಾಮೆ ಬರೆದಿರುತ್ತಾರೆ. ಸಾಕ್ಷಿ ಮುಂದುವರೆದು ಸದರಿ ವಿಲ್ ನಾಮೆ ದಿನಾಂಕ 15/06/2020 ರಂದು ನೊಂದಣಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಲ್ ನಾಮೆಯಾದ ದಿನಾಂಕದಂದು ಚಿಕ್ಕಮಗಳೂರು ಜಿಲ್ಲಾ ನ್ಯಾಯಾಲಯದಲ್ಲಿ ನಾನೇ ಸಲ್ಲಿಸಿದಂತಹ ಮೇಲ್ಮನವಿ ಸಂಖ್ಯೆ 51/2019 ವಿಚಾರಣೆಗೆ ಬಾಕಿ ಇತ್ತು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಯಾರು ಯಾರಿಗೆ ಎಷ್ಟು ಹಿಸ್ಸೆ ಎಂದು ಆದೇಶವಾಗಿದೆ ಎಂದರೆ ಸಾಕ್ಷಿ 5 ಭಾಗವಾಗಿದೆ ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವಂತಹ ವಿಲ್ ನಾಮೆಯಲ್ಲಿ ಮೇಲ್ಕಂಡ ಆರ್ ಎ ನಂ.51/2019 ರ ಮೇಲ್ಮನವಿಯಲ್ಲಿ 5 ಭಾಗವಾಗಬೇಕು ಎಂದು ಇರುವ ವಿಚಾರ ವಿಲ್ ನಾಮೆಯಲ್ಲಿ ಬರೆದಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರ್ ಎ ನಂ.51/2019 ರ ಮೇಲ್ಮನವಿ ಯಾವಾ ದಿನಾಂಕದಂದು ತೀರ್ಮಾನವಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ತಂದೆ ವಿಲ್ ನಾಮೆ ಬರೆದಿರುತ್ತಾರೆ ಎಂದು ಹೇಳಲಾದ ದಿನಾಂಕದಂದು ನಾನು, 2 ಮತ್ತು 3 ನೇ ಎದುರುದಾರರ ಹಾಜರಿದ್ದೇವು. ವಿಲ್ ನಾಮೆ ಬರೆಯುತ್ತಿರುವುದಾಗಿ ನನ್ನ ತಂದೆ ಮೊಟ್ಟ ಮೊದಲ ಬಾರಿಗೆ ಯಾರಿಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ವಕೀಲರಿಗೆ ತಿಳಿಸಿರುತ್ತಾರೆ ಎಂದುನುಡಿಯುತ್ತಾರೆ. ದಿನಾಂಕ 08/06/2020 ರಂದು ಬೆಳಗ್ಗೆ ವಕೀಲರಿಗೆ ವಿಲ್ ನಾಮೆಯ ವಿಚಾರ

ತಿಳಿಸಿರುತ್ತಾರೆ. ಆ ರೀತಿ ವಕೀಲರಿಗೆ ವಿಚಾರ ತಿಳಿಸುವ ಸಮಯದಲ್ಲಿ ಎದುರುದಾರರಾದ ನಾವು ಎಲ್ಲಾರೂ ಹಾಜರಿದ್ದೇವು. ಆ ಸಮಯದಲ್ಲಿ ಕೇವಲ ನನ್ನ ಒಬ್ಬನಿಗೆ ಮಾತ್ರ ಆಸ್ತಿಯನ್ನು ಏಕೆ ಕೊಡುತ್ತಿದ್ದಾರೆಂದು ನನ್ನ ತಂದೆಗೆ ಯಾರು ಪ್ರಶ್ನೆ ಮಾಡಿಲ್ಲವಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುದುವರೆದು ನಾನು ನನ್ನ ತಂದೆಯ ಸೇವೆ ಮಾಡಿರುವುದರಿಂದ ಅದನ್ನು ಯಾರು ಸಹ ಪ್ರಶ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಕೀಲರೆ ವಿಲ್ ನಾಮೆಯನ್ನು ಬೆರಳಚ್ಚು ಮಾಡಿಸಿರುತ್ತಾರೆ. ಸಾಕ್ಷಿ ಮುಂದುವರೆದು ವಕೀಲರು ಟೈಪ್ ಮಾಡಿಸಿದ್ದು ಅದನ್ನು ನಾನು ಪಡೆದುಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 08/06/2020 ರಂದು ವಿಲ್ ನಾಮೆ ಬೆರಳಚ್ಚು ಆಗಿದ್ದು ಆದಾದ 8 ದಿನಗಳ ನಂತರ ಅದನ್ನು ನೊಂದಣಿ ಮಾಡಿಸಲಾಗಿರುತ್ತದೆ. ವಿಲ್ ನಾಮೆಗೆ ಸಾಕ್ಷಿದಾರರಾಗಿ ಸಹಿ ಮಾಡಿರುವವರನ್ನು ಯಾವಾಗ ಕರೆದುಕೊಂಡು ಬಂದಿದ್ದು ಎಂದರೆ ಸಾಕ್ಷಿ ದಿನಾಂಕ 10/06/2020 ರಂದು ಮನೆಗೆ ಕರೆದುಕೊಂಡು ಬಂದಿರುತ್ತೇನೆ, ಅದೇ ಸಾಕ್ಷಿಗಳು ದಿನಾಂಕ 15/06/2020 ರಂದು ನೊಂದಣಿ ಕಚೇರಿಗೂ ಸಹ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.